# ಶಿಕ್ಷಕ ತನ್ನೊಳಗನ್ನು ತಾನು ಕಂಡುಕೊಂಡಿದ್ದಾನೆಯೇ?

*– ಶಿವಕುಮಾರ್ ಎಸ್.*

## ಲೇಖನದ ಸಾರಾಂಶ

*ಶೈಕ್ಷಣಿಕ ನೀತಿಗಳು ಮತ್ತು ಸಮಾಜದ ನಿರೀಕ್ಷೆಯಂತೆ ಸಮಾಜಮುಖಿ, ಚಿಂತನಶೀಲ ವ್ಯಕ್ತಿತ್ವವುಳ್ಳ ಜವಾಬ್ದಾರಿಯುತ ನಾಗರಿಕರನ್ನು ಶಾಲಾ ಪ್ರಕ್ರಿಯೆಯ ಮೂಲಕ ಸಿದ್ಧಗೊಳಿಸಬೇಕು ಎಂಬುದೇ ಶಿಕ್ಷಣದ ಆಶಯ ಎಂದು ಒಪ್ಪಿಕೊಂಡರೆ, ಅಂತಹ ವ್ಯಕ್ತಿಗಳನ್ನು ರೂಪುಗೊಳಿಸುವ ಶಿಕ್ಷಕರು ಎಂತಹವರಾಗಿರಬೇಕು ಎನ್ನುವ ಮೂಲ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಲೇಖಕರು ಪ್ರತಿಫಲನಾತ್ಮಕವಾಗಿ ಪರಿಶೋಧಿಸುತ್ತಾರೆ. ತುಮಕೂರು, ಮಧುಗಿರಿ ಶೈಕ್ಷಣಿಕ ಜಿಲ್ಲೆಗಳ ಆಯ್ದ ಶಿಕ್ಷಕರನ್ನು ಅಧ್ಯಯನಕ್ಕೆ ಒಳಪಡಿಸಿ ಅವರ ಜೊತೆ ನಡೆಸಿದ ಚರ್ಚೆಗಳು, ಶಿಕ್ಷಕರ ವಾಟ್ಸ್‌ಆಪ್ ಗುಂಪುಗಳು ಮತ್ತು ಕ್ಲಸ್ಟರ್ ಸಮಾಲೋಚನಾ ಸಭೆಗಳಲ್ಲಿ ನಡೆದ ಚರ್ಚೆಗಳನ್ನು ಆಧರಿಸಿ ಶಿಕ್ಷಕರ ಅಭಿಪ್ರಾಯಗಳು ಹಾಗೂ ಆಚರಣೆಗಳಲ್ಲಿ ಕಂಡುಬರುವ ವ್ಯತಿರಿಕ್ತತೆಗಳನ್ನು ಗುರುತಿಸುವ ಮೂಲಕ ಶಿಕ್ಷಕರ ಅಸ್ಮಿತೆಯ ನೆಲೆಯನ್ನು ಕಾಣುವ ಪ್ರಯತ್ನವನ್ನು ಲೇಖನ ಮಾಡುತ್ತದೆ.*

## ಪೀಠಿಕೆ

ಶಿಕ್ಷಕನಾದವನು ಹೀಗಿರಬೇಕೆಂದು ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ನಿರೀಕ್ಷೆಗಳಿವೆ. ಈ ನಿರೀಕ್ಷೆಗಳು ವ್ಯವಸ್ಥೆಯಿಂದಲೇ ರೂಪಿತವಾಗಿವೆ. ಇದು ಶಿಕ್ಷಕರಿಗೂ ಗೊತ್ತು. ಆದಾಗ್ಯೂ ಈ ನಿರೀಕ್ಷೆಗಳಿಗನುಗುಣವಾಗಿ ಶಿಕ್ಷಕರ ನಡವಳಿಕೆಗಳು ಇಲ್ಲದಿರುವುದನ್ನು ನಾನು ಅನೇಕ ಸಂದರ್ಭಗಳಲ್ಲಿ ಕಂಡುಕೊಂಡೆ. ಶಿಕ್ಷಕ ತನ್ನ ಅಸ್ಮಿತೆಯನ್ನು (Identity) ಕಳೆದುಕೊಂಡಿದ್ದಾನೆ ಎಂದು ಅನಿಸಿತು. ಅದಕ್ಕೆ ಕಾರಣಗಳನ್ನು ಗುರುತಿಸುವುದು ಮತ್ತು ಇದಕ್ಕೆ ನನ್ನದೇ ಆದ ಪರಿಹಾರಗಳನ್ನು ಕಂಡುಕೊಳ್ಳುವುದು ಈ ಅಧ್ಯಯನದ ಉದ್ದೇಶ.

## ಶಿಕ್ಷಕನ ಅಸ್ಮಿತೆ: ಹಾಗೆಂದರೇನು?

ಒಬ್ಬ ವ್ಯಕ್ತಿ ಶಿಕ್ಷಕನಾದಾಗ ಅವನು ಸಾಮಾನ್ಯ ವ್ಯಕ್ತಿಗಿಂತ ವಿಶೇಷನಾಗುತ್ತಾನೆ. ಶಿಕ್ಷಕ ಕೂಡ ವ್ಯಕ್ತಿಯಾಗಿದ್ದರೂ ಆತನ ಆಲೋಚನೆಗಳು ಇತರ ವ್ಯಕ್ತಿಗಳ ಆಲೋಚನೆಗಳಿಗಿಂತ ಭಿನ್ನ ಮತ್ತು ಮೇಲ್ಮಟ್ಟದ್ದಾಗಿರಬೇಕು. ಸಮಷ್ಟಿ ಗುಣವನ್ನು ಹೊಂದಿರಬೇಕು. ನಿರ್ವಂಚನೆಯಿಂದ, ನಿರಪೇಕ್ಷೆಯಿಂದ, ನಿಷ್ಪಕ್ಷಪಾತವಾಗಿ ಅವನ ವರ್ತನೆಗಳಿರಬೇಕು. ಅಬ್ದುಲ್ ಕಲಾಂ, ರಾಧಾಕೃಷ್ಣನ್ ಮುಂತಾದವರ ಕೆಲವು ಮಾದರಿಗಳು ನಮ್ಮ ಮುಂದಿವೆ. ವ್ಯಕ್ತಿ, ಕುಟುಂಬ, ಸಮಾಜ ಮತ್ತು ಪ್ರಕೃತಿಯೊಂದಿಗೆ

ಸಹಬಾಳ್ವೆ ನಡೆಸುವ ಜೀವನ ಕ್ರಮವನ್ನು ತಾನು ಅನುಸರಿಸುತ್ತಾ ಅದರ ಆಶಯಗಳನ್ನು ತನ್ನ ವಿದ್ಯಾರ್ಥಿಗಳಿಗೂ ಕಲಿಸಬೇಕು. ಇದನ್ನು ಶಿಕ್ಷಣಕ್ಕೆ ಸಂಬಂಧಿಸಿದ ನೀತಿ ನಿರೂಪಣಾ ದಾಖಲೆಗಳು ಮತ್ತು ಶಿಕ್ಷಣ ತಜ್ಞರು ಒತ್ತಿ ಹೇಳಿದ್ದಾರೆ. ಇಂತಹ ಗುಣಗಳೇ ಒಬ್ಬ ಶಿಕ್ಷಕನ ಅಸ್ಮಿತೆ. ಇಂತಹ ಲಕ್ಷಣಗಳನ್ನು ಹೊಂದಿಲ್ಲದ ಶಿಕ್ಷಕನನ್ನು ಏನೆಂದು ಕರೆಯುವುದು? ಶಿಕ್ಷಕ ರೂಪದಲ್ಲಿರುವ ವ್ಯಕ್ತಿ ಎಂದು ಗುರುತಿಸಬಹುದೇ? ನಮ್ಮನ್ನೇ ನಾವು ಪ್ರಶ್ನಿಸಿಕೊಳ್ಳೋಣ.

ಶಿಕ್ಷಕ ಸದಾ ಅಧ್ಯಯನಶೀಲನೂ, ಸ್ವಚಿಂತನೆ ಮಾಡುವವನೂ, ಸಾಮಾಜಿಕ ಸೂಕ್ಷ್ಮತೆ ಮತ್ತು ಪ್ರಜ್ಞಾಪೂರ್ವಕ ನಿಲುವನ್ನು ಹೊಂದಿರುವವನೆಂದೂ ಅಪೇಕ್ಷಿಸಲಾಗಿದೆ. ಅದು ಒಪ್ಪಿತ ಮೌಲ್ಯವೂ ಆಗಿದೆ. ಇದನ್ನು ಯಾರೂ ನಿರಾಕರಿಸಲಾರರು. ಈ ಗುಣಗಳನ್ನು ಒಬ್ಬ ಮಾದರಿ ಶಿಕ್ಷಕನಲ್ಲಿ ಗುರುತಿಸಬಹುದಾಗಿದೆ.

## ಅಧ್ಯಯನದ ವ್ಯಾಪ್ತಿ ಮತ್ತು ವಿಧಾನಗಳು

- ಶಿಕ್ಷಕರೊಂದಿಗಿನ ಒಡನಾಟದ ಸಂದರ್ಭಗಳಲ್ಲಿ ಅವರೊಂದಿಗೆ ನಡೆಸಿದ ಚರ್ಚೆಗಳಲ್ಲಿ ಅವರ ಮೂಲಕ ಹೊರಬಂದ ಭಾವನೆಗಳು, ಯೋಚನಾಲಹರಿ, ಮನಸ್ಥಿತಿ, ಔಪಚಾರಿಕ ಶಿಕ್ಷಣದ ಬಗ್ಗೆ ಅವರ ಒಲವು – ನಿಲುವುಗಳನ್ನು ಸೂಕ್ಷ್ಮವಾಗಿ ಗಮನಿಸಿ ಮಾಹಿತಿ ಸಂಗ್ರಹಣೆ.
- ಕ್ಲಸ್ಟರ್ ಸಮಾಲೋಚನಾ ಸಭೆಗಳು, ಶಿಕ್ಷಕರ ಸಾಮಾನ್ಯ ಸಭೆಗಳಲ್ಲಿ ನಡೆಯುತ್ತಿದ್ದ ಚರ್ಚೆ ಮತ್ತು ಚಟುವಟಿಕೆಗಳಿಂದ ಸಂಗ್ರಹಿಸಿದ ಮಾಹಿತಿ.
- ಶಿಕ್ಷಕರೇ ರೂಪಿಸಿಕೊಂಡಿರುವ ವಾಟ್ಸ್‌ಆಪ್ ಗುಂಪುಗಳಲ್ಲಿ ವಿನಿಮಯವಾಗುವ ಸಂದೇಶಗಳು ಈ ಅಧ್ಯಯನದ ವಸ್ತು ವಿಷಯಗಳಾಗಿವೆ.
- ತುಮಕೂರು, ಮಧುಗಿರಿ ಶೈಕ್ಷಣಿಕ ಜಿಲ್ಲೆಗಳಿಂದ 25 ಜನ ಆಯ್ದ ಸೇವಾನಿರತ ಶಿಕ್ಷಕರಿಗೆ ನಗರ, ಗ್ರಾಮೀಣ, ಮಹಿಳಾ, ಸೇವಾ ಹಿರಿತನ, ಮುಂತಾದ ಮಾನದಂಡಗಳ ಆಧಾರದಲ್ಲಿ ಪ್ರಶ್ನಾವಳಿಗಳನ್ನು ಕೊಟ್ಟು ದತ್ತಾಂಶಗಳನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದೆ.

## ಅಧ್ಯಯನದ ಮಿತಿಗಳು

- ಈ ಅಧ್ಯಯನದ ವಸ್ತು ವಿಷಯಗಳು ಸಾರ್ವಕಾಲಿಕವಲ್ಲ.
- ಎಲ್ಲಾ ಸಂದರ್ಭಗಳು ಮತ್ತು ಭಾಗಗಳಿಗೂ ಅನ್ವಯಿಸದಿರಬಹುದು.
- ಬೇರೆ ಬೇರೆ ದತ್ತಾಂಶಗಳನ್ನು ನೋಡಲು ಅವಕಾಶವಿರಬಹುದು.
- ನಾನು ನೋಡಿದ ದೃಷ್ಟಿ ಬೇರೆ ಸಂದರ್ಭಗಳಲ್ಲಿ ಭಿನ್ನವಾಗಿರಬಹುದು.
- ಸರ್ಕಾರಿ ಶಾಲಾ ಶಿಕ್ಷಕರನ್ನು ಯಾದೃಚ್ಛಿಕವಾಗಿ ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.
- ಸಾಂದರ್ಭಿಕ ಮಾಹಿತಿಯನ್ನು ಆಧರಿಸಿದೆ.

## ಅಧ್ಯಯನದ ವಿಶ್ಲೇಷಣೆ

ಶಿಕ್ಷಕರೊಂದಿಗೆ ಸಂದರ್ಭೋಚಿತವಾಗಿ ಮತ್ತು ಪ್ರಾಸಂಗಿಕವಾಗಿ ಮಾತನಾಡುವಾಗ, ಚರ್ಚಿಸುವಾಗ, ಅನೇಕ ಚಿಂತನಾತ್ಮಕ ಅಭಿಪ್ರಾಯಗಳು ಹೊರಬರುತ್ತವೆ. ಶೇ. 25 ರಿಂದ 30 ಶಿಕ್ಷಕರು, ಇರುವ ವ್ಯವಸ್ಥೆಯಲ್ಲೇ ಚಿಂತನಾತ್ಮಕವಾಗಿ ತಮ್ಮ ವೃತ್ತಿ ನಿರ್ವಹಣೆ ಮಾಡಲು ಬಯಸುತ್ತಾರೆ. ಉತ್ತಮ ಶಿಕ್ಷಕರಾಗಿರಲು ಅಪೇಕ್ಷಿಸುತ್ತಾರೆ. ಇವರಲ್ಲಿ ಕೆಲವರು ಶಿಕ್ಷಕ ವೃತ್ತಿಗೆ ಆಕಸ್ಮಿಕವಾಗಿ, ಅನಿವಾರ್ಯವಾಗಿ ಬಂದಿದ್ದರೂ ಕೂಡ ಶಿಕ್ಷಕ ವೃತ್ತಿ ಒಂದು ಗೌರವಯುತ ಹುದ್ದೆ ಎಂಬುದನ್ನು ಮನಗಂಡು ಅದರ ಆಶಯದಂತೆ ಇರಲು ಇಚ್ಚೆಪಡುತ್ತಾರೆ. ಉತ್ತಮ ಸಮಾಜ ನಿರ್ಮಾಣದಲ್ಲಿ ನಮ್ಮ ಪಾತ್ರ ಮಹತ್ವವಾದದ್ದು ಎಂಬ ಗ್ರಹಿಕೆ ಅವರಿಗೆ ಸ್ಪಷ್ಟವಾಗಿದೆ.

ಶೇ. 70ರಿಂದ 75 ಶಿಕ್ಷಕರು ಈ ಹುದ್ದೆಗೆ ಆಕಸ್ಮಿಕವಾಗಿ, ಅನಿವಾರ್ಯವಾಗಿ, ಬರಬೇಕಾಯಿತು. ನನಗೆ ಬೇರೆ ಕಡೆ ಒಳ್ಳೆಯ ಅವಕಾಶ ಸಿಕ್ಕಿದರೆ ಈ ವೃತ್ತಿಯನ್ನು ತೊರೆಯುತ್ತೇನೆ. ಈ ವೃತ್ತಿಗಿಂತ ಬೇರೆ ವೃತ್ತಿಗಳಲ್ಲಿ ಉತ್ತಮ ಸಂಬಳ, ಸೌಕರ್ಯಗಳು, ದೊರೆಯುತ್ತವೆ ಎಂದು ಭಾವಿಸುತ್ತಾರೆ.

ಕ್ಲಸ್ಟರ್ ಸಮಾಲೋಚನಾ ಸಭೆಗಳಲ್ಲಿ ಮತ್ತು ಶಿಕ್ಷಕರ ಸಾಮಾನ್ಯ ಸಭೆಗಳಲ್ಲಿ ಶಿಕ್ಷಕರ ವೃತ್ತಿಗೆ ಸಂಬಂಧಿಸಿದಂತೆ ಮತ್ತು ಶೈಕ್ಷಣಿಕ ಬೆಳವಣಿಗೆಗೆ ಸಂಬಂಧಿಸಿದಂತೆ ಚರ್ಚೆಗಳಾಗಲಿ ಎಂದು ಇಲಾಖೆಯು ಈ ಸಭೆಗಳನ್ನು ಆಯೋಜಿಸುವ ವ್ಯವಸ್ಥೆ ಮಾಡುತ್ತದೆ. ಆದರೆ ಈ ಸಭೆಗಳಲ್ಲಿ ಇಂತಹ ಚರ್ಚೆಗಳು ತುಂಬಾ ಕಡಿಮೆಯಾಗುವುದನ್ನು ಗುರುತಿಸಲಾಗಿದೆ. ಶಿಕ್ಷಕನ ವೃತ್ತಿಪರತೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚೆ ಮಾಡಬೇಕೆಂಬುದು ಭಾಗವಹಿಸಿರುವ ಬಹುತೇಕ ಶಿಕ್ಷಕರಿಗೆ ಅನಿಸುತ್ತಿಲ್ಲ. ಕೇವಲ ಇಲಾಖೆಯ ಆದೇಶಗಳನ್ನು ಹೇಳುವುದು ಮತ್ತು ಮಾಹಿತಿ ಸಂಗ್ರಹಣೆಯಂತಹ ಕಾರ್ಯಗಳಿಗೆ ಸದರಿ ಸಭೆಗಳು ಸೀಮಿತವಾಗಿರುವುದನ್ನು ಗಮನಿಸಬಹುದು. ಈ ಸಭೆಗಳು ಉದ್ದೇಶಕ್ಕನುಗುಣವಾಗಿ ನಡೆಯದಿದ್ದರೆ ಶಿಕ್ಷಕ ತನ್ನನ್ನು ತಾನು ಕಳೆದುಕೊಂಡಂತೆಯೇ ಸರಿ.

ಶಿಕ್ಷಕರ ವಾಟ್ಸ್‌ಆಪ್ ಗುಂಪುಗಳಲ್ಲಿ ಹಂಚಿಕೊಳ್ಳುವ ಶೇ. 80ಕ್ಕಿಂತ ಹೆಚ್ಚು ಪ್ರಮಾಣದ ಸಂದೇಶಗಳು ಶಿಕ್ಷಕರ ವೃತ್ತಿ ಬೆಳವಣಿಗೆಗೆ ಸಂಬಂಧಿಸಿಲ್ಲದೇ ಇರುವುದನ್ನು ಗಮನಿಸಲಾಗಿದೆ. ವಾಟ್ಸ್‌ಆಪ್ ಚರ್ಚೆಗಳಲ್ಲಿ ಬಹುಮುಖ್ಯವಾಗಿ ಸಂಬಳ, ಭತ್ಯೆ, ವರ್ಗಾವಣೆ, ಅಧಿಕಾರಿಗಳ ಬದಲಾವಣೆ ವಿಷಯಗಳು, ಇಲಾಖಾ ಆದೇಶಗಳು ಮುಂತಾಗಿ ಸಂವಾದಗಳಾಗುತ್ತವೆಯೇ ಹೊರತು ಶಿಕ್ಷಕರ ದಿನನಿತ್ಯದ ತರಗತಿ ನಿರ್ವಹಣೆಗೆ ಸಂಬಂಧಿಸಿದಂತೆ, ಸವಾಲುಗಳಿಗೆ ಸಂಬಂಧಿಸಿದಂತೆ ಚರ್ಚೆಗಳು ಇಲ್ಲವೇ ಇಲ್ಲ ಎನ್ನಬಹುದು.

ಶೇ. 50ಕ್ಕಿಂತ ಹೆಚ್ಚು ಶಿಕ್ಷಕರಿಗೆ ಈ ವ್ಯವಸ್ಥೆಯ ಬಗ್ಗೆ ಅಸಮಾಧಾನವಿದೆ. ಯಾವುದೂ ಸರಿಯಿಲ್ಲ, ಸರಿಪಡಿಸಲು ಸಾಧ್ಯವೂ ಇಲ್ಲ ಎಂಬ ತೀರ್ಮಾನಕ್ಕೆ ಬರುತ್ತಾರೆ. ಸುಮಾರು ಶೇ.40 ರಷ್ಟು ಶಿಕ್ಷಕರು ಇರುವುದರಲ್ಲಿ ಸಾಧ್ಯವಾದಷ್ಟು ಉತ್ತಮ

ಕೆಲಸಗಳನ್ನು ಮಾಡಲು ಬಯಸುತ್ತಾರೆ. ಶೇ. 10ರಷ್ಟು ಶಿಕ್ಷಕರು ಇರುವ ವ್ಯವಸ್ಥೆಯಲ್ಲೇ ಇರುವ ಅಡೆತಡೆಗಳನ್ನು ಮೀರಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಗಾಗಿ ಉತ್ತಮವಾಗಿ ಕೆಲಸ ಮಾಡುವ ಇರುವ ಅಡೆತಡೆಗಳ, ಇತಿ-ಮಿತಿಗಳ ನಡುವೆ ಉತ್ತಮವಾಗಿ ಕೆಲಸ ಮಾಡುವವರ ಸಂಖ್ಯೆ ಹೆಚ್ಚಾಗಬೇಕಿದೆ.

ಇಲಾಖೆಯಲ್ಲಿರುವ ಭ್ರಷ್ಟಾಚಾರ, ಕಾರ್ಯವಿಳಂಬ, ಜಾತೀಯತೆ, ಸಂಕುಚಿತ ಮನೋಭಾವ, ಹೆಚ್ಚಾಗಿದೆ ಎಂದು ಶೇ. 50ಕ್ಕಿಂತ ಹೆಚ್ಚು ಜನ ಶಿಕ್ಷಕರು ಒಪ್ಪುತ್ತಾರೆ. ಆದರೂ ನಮ್ಮ ಕೆಲಸವನ್ನು ನಾವು ಪ್ರಾಮಾಣಿಕವಾಗಿ ಮಾಡಲು ಪ್ರಯತ್ನಿಸುತ್ತೇವೆ ಎಂದು ಹೇಳಿಕೊಳ್ಳುತ್ತಾರೆ. ನಾವು ವ್ಯವಸ್ಥೆಗೆ ಅನುಗುಣವಾಗಿಯೇ ಇರಬೇಕಾಗುತ್ತದೆ. ಪ್ರವಾಹದ ವಿರುದ್ಧ ಈಜಲು ಸಾಧ್ಯವೇ? ಎಲ್ಲರೂ ಈ ವ್ಯವಸ್ಥೆಯನ್ನು ಒಪ್ಪಿಕೊಂಡಿರುವಾಗ ನಾನೇನು ಮಾಡಲು ಸಾಧ್ಯ? ಎಂದು ಶೇ. 60ಕ್ಕಿಂತ ಹೆಚ್ಚು ಶಿಕ್ಷಕರು ಭಾವಿಸಿದ್ದಾರೆ.

ಇವೆಲ್ಲವೂ ಶಿಕ್ಷಕ ವ್ಯಕ್ತಿಯೊಳಗೆ ಇರಬೇಕಾದ ಶಿಕ್ಷಕನನ್ನು ಸೀಮಿತಗೊಳಿಸಿವೆ. ನಾವೇನು ಮಾಡುತ್ತಿದ್ದೇವೆಯೋ ಅದೇ ಸದ್ಯದ ಸಂದರ್ಭದಲ್ಲಿ ಉತ್ತಮವಾಗಿದೆ ಎಂದು ತಮಗೆ ತಾವೇ ಒಂದು ಪರಿಧಿಯನ್ನು ರಚಿಸಿಕೊಂಡಿದ್ದಾರೆ. ಈ ಪರಿಧಿಯನ್ನು ಶೇ. 20-25 ಶಿಕ್ಷಕರು ದಾಟಲು ಸಿದ್ಧರಿದ್ದರೂ ತಮಗೆ ಅನೇಕ ಅಡೆತಡೆಗಳಿವೆ ಎಂದು ಭಾವಿಸಿದ್ದಾರೆ. ಹಾಗೆಯೇ ಶೇ. 70-80 ಶಿಕ್ಷಕರು ಅವರ ಸಂದರ್ಭಗಳಲ್ಲಿ ಬರುವ ಚಟುವಟಿಕೆಗಳ ನಿರ್ವಹಣೆಯನ್ನೇ ಶಿಕ್ಷಕ ವೃತ್ತಿ ಎಂದು ಭಾವಿಸಿದ್ದಾರೆ.

ಇನ್ನೊಂದು ಕುತೂಹಲಕಾರಿ ಅಂಶವೆಂದರೆ ಶೇ. 50-60 ಶಿಕ್ಷಕರು, ಶಿಕ್ಷಕ ವೃತ್ತಿ ಹೆಚ್ಚು ಸಂಬಳ ತರುವ ವೃತ್ತಿಯಲ್ಲ ಎಂದು ಭಾವಿಸಿದ್ದಾರೆ. ಅವರು ಬೇರೆ ಬೇರೆ ಹುದ್ದೆ ಅಥವಾ ಉದ್ಯೋಗಗಳೊಂದಿಗೆ ತಮ್ಮ ವೃತ್ತಿಯನ್ನು ಸಂಬಳದ ಆಧಾರದಲ್ಲಿ ಹೋಲಿಸಿಕೊಳ್ಳುತ್ತಾರೆ. ಇನ್ನು ಕೆಲವರು ಶಿಕ್ಷಕ ವೃತ್ತಿಗಿಂತ ಕಡಿಮೆ ಸಂಬಳ ಬರುವ ಗುಮಾಸ್ತ, ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಂತಹ ಹುದ್ದೆಗಳು ಶಿಕ್ಷಕ ವೃತ್ತಿಗಿಂತ ಮೇಲು ಎನ್ನುವವರಿದ್ದಾರೆ. ಶಿಕ್ಷಕ ವೃತ್ತಿಯಲ್ಲಿ 10-15 ವರ್ಷಗಳ ಸೇವೆ ಸಲ್ಲಿಸಿರುವವರು ಇಂತಹ ಹುದ್ದೆಗಳಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸಿ ಶಿಕ್ಷಕ ವೃತ್ತಿಯನ್ನು ತೊರೆದು ಈ ಹುದ್ದೆಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇಂತಹವರನ್ನು ನೋಡಿ ಶಿಕ್ಷಕರು ಅವರನ್ನು ಅದೃಷ್ಟವಂತರು ಎಂದು ಭಾವಿಸಿದ್ದಾರೆ. ವಾಟ್ಸ್‌ಆಪ್ ಗುಂಪುಗಳಲ್ಲಿ ಅವರಿಗೆ ಶುಭಾಶಯಗಳನ್ನು ಕೋರುತ್ತಾರೆ.

ಇವೆಲ್ಲವುಗಳನ್ನೂ ಗಮನಿಸಿದಾಗ ಶಿಕ್ಷಕ ವೃತ್ತಿಯನ್ನು ಸ್ವೀಕರಿಸಿರುವ ಅನೇಕ ವ್ಯಕ್ತಿಗಳಲ್ಲಿ ಶೇ. 50ಕ್ಕಿಂತ ಹೆಚ್ಚು ವ್ಯಕ್ತಿಗಳು ಅಸಮಾಧಾನಿಗಳಾಗಿದ್ದಾರೆ. ಇದನ್ನು ಈ ಅಧ್ಯಯನದಿಂದ ಗುರುತಿಸಬಹುದಾಗಿದೆ.

## ಶಿಕ್ಷಕನ ಮೇಲಿನ ನಿರೀಕ್ಷೆಗಳು

ಶಿಕ್ಷಣಕ್ಕೆ ಸಂಬಂಧಿಸಿದ ನೀತಿ-ನಿಯಮಗಳು ಶಿಕ್ಷಕ ಎಂದರೆ ಹೀಗಿರಬೇಕು ಎಂದು ನಿರೀಕ್ಷೆಗಳನ್ನು ವಿವರಿಸುತ್ತವೆ. "ಸದೃಢ ಸಮಾಜ ಕಟ್ಟುವ ಜವಾಬ್ದಾರಿ ಶಿಕ್ಷಕರದ್ದು" ಇದೊಂದು ಸಾರ್ವತ್ರಿಕ ಅಭಿಪ್ರಾಯ. ಸದೃಢ ಶಿಕ್ಷಣದಿಂದ ಮಾತ್ರ ಸದೃಢ ಸಮಾಜ

ಕಟ್ಟಲು ಆಗುತ್ತದೆ. ಶಾಲೆಯಂತಹ ಔಪಚಾರಿಕ ಶಿಕ್ಷಣ ಸಂಸ್ಥೆಯ ನಿಜವಾದ ಆಧಾರ ಸ್ತಂಭಗಳು ಶಿಕ್ಷಕರು. ಇವರು ಶಿಕ್ಷಣದ ಮೂಲ ಉದ್ದೇಶ, ಗುರಿಗಳ ಬಗ್ಗೆ ಸ್ಪಷ್ಟವಾದ ಅರಿವು, ಸರಿಯಾದ ತಿಳುವಳಿಕೆ ಹೊಂದಿರಬೇಕಾಗುತ್ತದೆ. ಸಮಾಜದಲ್ಲಿ ಶಿಕ್ಷಕನಿಗೆ ವಿಶೇಷ ಸ್ಥಾನ ಇದೆ. ಅವನ ನಡೆ-ನುಡಿಗಳು, ಆಚಾರ-ವಿಚಾರಗಳು, ಬದುಕು, ಎಲ್ಲರಿಗೂ ಮಾದರಿಯಾಗಿರಬೇಕು.

## ಶಿಕ್ಷಕನು ನಿರೀಕ್ಷೆಗನುಗುಣವಾಗಿ ಇದ್ದಾನೆಯೇ?

ಪ್ರಸ್ತುತ ಅಧ್ಯಯನದ ಆಧಾರದಲ್ಲಿ ನೋಡುವುದಾದರೆ ಶಿಕ್ಷಕನ ಸ್ಥಾನ-ಮಾನ ಮತ್ತು ಅವನನ್ನು ಗುರುತಿಸುವಿಕೆ, ಮೇಲಿನ ನಿರೀಕ್ಷೆಯಂತೆ, ಹಲವಾರು ಸಂದರ್ಭಗಳಲ್ಲಿ ಇಲ್ಲದಿರುವುದನ್ನು ಗುರುತಿಸಬಹುದಾಗಿದೆ. ಶಿಕ್ಷಕನಿಗೆ ಕನಸುಗಳು ಇಲ್ಲದಿದ್ದರೆ, ಅವನು ಮಕ್ಕಳ ಕನಸುಗಳನ್ನು ಹೇಗೆ ಸಾಕಾರಗೊಳಿಸಬಲ್ಲ? ಉದಾ: ಒಂದು ಶಾಲೆಗೆ ನಾನು ಭೇಟಿ ನೀಡಿದ್ದಾಗ, ಶಾಲೆಗೆ ತಡವಾಗಿ ಬರುವ ವಿದ್ಯಾರ್ಥಿಯನ್ನು ಒಬ್ಬ ಶಿಕ್ಷಕರು ಪ್ರಶ್ನಿಸಿ ಅವನಿಗೆ ಶಿಕ್ಷೆ ಕೊಡುತ್ತಾರೆ. ಅದೇ ಸಂದರ್ಭದಲ್ಲಿ ಶಾಲೆಯ ಮತ್ತೊಬ್ಬ ಶಿಕ್ಷಕರು ಶಾಲೆಗೆ ತಡವಾಗಿ ಬರುತ್ತಾರೆ. ಇದು ಶಿಕ್ಷೆ ಅನುಭವಿಸಿದ ವಿದ್ಯಾರ್ಥಿಯ ಮೇಲೆ ಬೀರುವ ಪರಿಣಾಮವಾದರೂ ಏನು? ಮಗುವಿನಿಂದ ತಾವೇನು ಬಯಸುತ್ತೇವೆಯೋ, ಅದು ಮೊದಲು ಶಿಕ್ಷಕರಲ್ಲಿ ಇರಬೇಕಾಗುತ್ತದೆ. ಮಕ್ಕಳ ಕುರಿತು ಕಾಳಜಿ ವಹಿಸದ, ಅವರ ಜೊತೆ ಸಂತೋಷವಾಗಿರದ, ಸದಾ ಜ್ಞಾನಕ್ಕಾಗಿ ಹಂಬಲಿಸದ, ಮಕ್ಕಳ ಸಮಸ್ಯೆಗಳಿಗೆ ಸೂಕ್ತ ಸಂವೇದನೆ ಹೊಂದದೇ ಇರುವ ಶಿಕ್ಷಕನ ಬಗ್ಗೆ ಯಾವ ನಿರೀಕ್ಷೆಗಳನ್ನು ಹೊಂದಿರಲು ಸಾಧ್ಯ? ಈ ನಿಟ್ಟಿನಲ್ಲಿ ಸದ್ಯದ ಸಂದರ್ಭಗಳಲ್ಲಿ ಶಿಕ್ಷಕನು ತನ್ನ ಬದ್ಧತೆಯನ್ನು ತೋರಿಸಬೇಕಾಗುತ್ತದೆ.

## ಶಿಕ್ಷಕರಿಗಿರುವ ಸವಾಲುಗಳು

ಶೇ. 70ಕ್ಕಿಂತ ಹೆಚ್ಚು ಶಿಕ್ಷಕರು ನಾವು ಮೇಲಿನವರ ನಿರ್ದೇಶನಕ್ಕೆ ಅನುಸಾರವಾಗಿ ಕೆಲಸ ಮಾಡಬೇಕಾಗಿದೆ. ಮೇಲಿನ ಅಧಿಕಾರಿಗಳು ಮತ್ತು ಅನುಷ್ಠಾನಾಧಿಕಾರಿಗಳು, ನೀಡುವ ಸೂಚನೆಯನ್ನು ಪಾಲಿಸಬೇಕಾಗಿದೆ. ಇದು ನಮ್ಮ ಕರ್ತವ್ಯವನ್ನು ಯಾಂತ್ರಿಕಗೊಳಿಸಿದೆ. ನಮ್ಮ ಸ್ವಚಿಂತನೆ, ಆಲೋಚನೆ, ಪ್ರಜ್ಞಾಪೂರ್ವಕತೆಗಳಿಗೆ ಅವಕಾಶವಿಲ್ಲ. ತರಬೇತಿಗಳಲ್ಲಿ ಒಂದು ರೀತಿ ಮಾರ್ಗದರ್ಶನ ಸಿಕ್ಕಿದರೆ ತರಗತಿಯ ಕಾರ್ಯಾಚರಣೆಗಳಲ್ಲಿ ಅವುಗಳ ಅನುಷ್ಠಾನಕ್ಕಿಂತ ಅಧಿಕಾರಿಗಳು ಮತ್ತು ಅನುಷ್ಠಾನಾಧಿಕಾರಿಗಳ ಸಲಹೆಯಂತೆ ಕರ್ತವ್ಯ ನಿರ್ವಹಿಸಬೇಕಿದೆ ಎಂಬ ಗೊಂದಲದಲ್ಲಿ ಶಿಕ್ಷಕರಿದ್ದಾರೆ. ಸಂವಿಧಾನದ ಮೌಲ್ಯಗಳ ಆಧಾರದಲ್ಲಿ ಶಿಕ್ಷಣದ ಪರಿಕಲ್ಪನೆಯಲ್ಲಿ ಸ್ಪಷ್ಟತೆ ಇರಬೇಕಾಗುತ್ತದೆ. ಇದೇ ಎನ್.ಸಿ.ಎಫ್. 2005ರ ಆಶಯ. ಈ ಆಶಯಗಳಿಗೆ ಅನುಗುಣವಾಗಿ ಶಿಕ್ಷಕನ ವೃತ್ತಿ ಬದುಕು ಇರದಿದ್ದರೆ ಅದು ಯಾಂತ್ರಿಕವಾದ ಕೆಲಸವಾಗಿರುತ್ತದೆ.

## ರಚನಾವಾದದ ಹಿನ್ನೆಲೆಯಲ್ಲಿ ಶಿಕ್ಷಕನ ತರಗತಿ ನಿರ್ವಹಣೆ

ಮಗು ತನ್ನ ಜ್ಞಾನವನ್ನು ತಾನೇ ಕಟ್ಟಿಕೊಳ್ಳಲು ಶಿಕ್ಷಕ ಅನುಕೂಲಿಸಬೇಕು. ಆದರೆ ವಾಸ್ತವದಲ್ಲಿ ಶಿಕ್ಷಕನ ಸವಾಲುಗಳು ಅವನನ್ನು ಅನುಕೂಲಿಸಲು ಬಿಡುತ್ತಿಲ್ಲ ಎಂದು ಶಿಕ್ಷಕರು ನಂಬಿದ್ದಾರೆ. ಅದಕ್ಕೆ ಮತ್ತೆ ಅವರು ಸಾಂಪ್ರದಾಯಿಕ ಕಲಿಕಾ ವಿಧಾನಗಳನ್ನೇ ಅನುಸರಿಸುತ್ತಿದ್ದಾರೆ. ಈ ವಿಧಾನದಿಂದ ಮಕ್ಕಳು ಏನು ಕಲಿತಿದ್ದಾರೋ ಅದರ ಬಗ್ಗೆ ಶಿಕ್ಷಕರು ಸಮಾಧಾನಪಡುತ್ತಾರೆ. ಉದಾ: 7x5=35 ಎಂದು ಮಗ್ಗಿಯನ್ನು ಕಂಠಪಾಠ ಮಾಡಿ ಹೇಳುತ್ತಾರೆ. ಆದರೆ 7x5=35ರಲ್ಲಿ 35 ಹೇಗೆ ಸರಿ ಎಂದರೆ ಮಕ್ಕಳಿಗೆ ಉತ್ತರಿಸುವ ಸಾಮರ್ಥ್ಯ ಇಲ್ಲದಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಯಿತು. ಹಾಗೂ ಶಿಕ್ಷಕರು ಕಂಠಪಾಠ ಮಾಡಿದ ಮಗ್ಗಿ ಹೇಳುವುದೇ ವಿದ್ಯಾರ್ಥಿಯ ಸಾಧನೆ ಎಂದು ಭಾವಿಸಿದ್ದಾರೆ.

## ಶಿಕ್ಷಕರ ಸಂಘ–ಸಂಸ್ಥೆಗಳಲ್ಲಿ ಶಿಕ್ಷಕ

ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರು ತಮ್ಮದೇ ಆದ ಸಂಘ–ಸಂಸ್ಥೆಗಳನ್ನು ಕಟ್ಟಿಕೊಂಡಿದ್ದಾರೆ. ಇದಕ್ಕೆ ಅವಕಾಶವೂ ಇದೆ. ಆದರೆ ಈ ಸಂಘಟನೆಗಳ ಪದಾಧಿಕಾರಿಗಳಾಗಲು ಮತ್ತು ಗುರುತಿಸಿಕೊಳ್ಳಲು ಕೆಲವು ಶಿಕ್ಷಕರು ಉತ್ಸುಕರಾಗಿರುತ್ತಾರೆ. ಶಿಕ್ಷಕ ದಿನಾಚರಣೆಗಳಂತಹ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳನ್ನು ನೋಡಿದರೆ ಪದಾಧಿಕಾರಿ ಶಿಕ್ಷಕರ ಹೆಸರಿನ ಮುಂದೆ ಅವನ ಸಂಘ–ಸಂಸ್ಥೆಯ ಹುದ್ದೆಯಿಂದಲೇ ಅವರನ್ನು ಗುರುತಿಸಲಾಗುತ್ತದೆ. ಆ ಮೂಲಕವೇ ಅವರು ಗೌರವವನ್ನು ಪಡೆಯಲು ಬಯಸುತ್ತಾರೆ. ಬಹಳಷ್ಟು ಶಿಕ್ಷಕರು ಸಂಘ–ಸಂಸ್ಥೆಗಳಲ್ಲಿ ಗುರುತಿಸಿಕೊಳ್ಳುವಲ್ಲಿ ಆಸಕ್ತಿ ತೋರುತ್ತಾರೆ. ಇದೇ ರೀತಿಯ ಆಸಕ್ತಿಯನ್ನು ಅವರು ಶಾಲಾ ಕೆಲಸಗಳ ಮೇಲೆ ತೋರಿಸದಿರುವುದನ್ನು ಮತ್ತು ಶಿಕ್ಷಕನ ಕರ್ತವ್ಯಗಳನ್ನು ನಿರೀಕ್ಷೆಯಂತೆ ಮಾಡದಿರುವುದನ್ನು ಗಮನಿಸಬಹುದು. ನನ್ನ ವ್ಯಾಪ್ತಿಯ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು ಶಿಕ್ಷಕರ ಸಂಘದ ಅಧ್ಯಕ್ಷರಾಗಿದ್ದರು. ಅವರಿಗೆ ಅವರ ಶಾಲಾ ಕರ್ತವ್ಯಗಳಿಗಿಂತ ಶಿಕ್ಷಕ ಸಂಘದ ಕೆಲಸಗಳು, ಶಿಕ್ಷಕರಿಗೆ ಸವಲತ್ತುಗಳನ್ನು ಕೊಡಿಸುವುದರಲ್ಲೇ ಹೆಚ್ಚು ಆಸಕ್ತಿ ವಹಿಸುತ್ತಿದ್ದರು.

## ಶಿಕ್ಷಕರ ಅಸ್ಮಿತೆಯನ್ನು ಅವರು ಉಳಿಸಿಕೊಳ್ಳುವಲ್ಲಿ ಅಧಿಕಾರಿಗಳ ಪಾತ್ರ

ಅಧಿಕಾರಿಗಳು ಕೂಡ ದಿಢೀರ್ ಕೀರ್ತಿಯ ಪಾಲನ್ನು ಬಯಸುತ್ತಾರೆ. ಶಿಕ್ಷಕರು ಅವರ ನಿರೀಕ್ಷೆಯಂತೆ ಕೆಲಸ ಮಾಡಲು ಬಯಸುತ್ತಾರೆ. ಒಬ್ಬೊಬ್ಬ ಅಧಿಕಾರಿಗಳ ಮನಸ್ಥಿತಿ ಒಂದೊಂದು ತೆರನಾಗಿರುತ್ತದೆ. ಅಧಿಕಾರಿಗಳು ವರ್ಗಾವಣೆಯಾದಂತೆ, ಬದಲಾದಂತೆ, ಹೊಸದಾಗಿ ಬರುವ ಅಧಿಕಾರಿಗಳ ಮನಸ್ಥಿತಿಗೆ ಹೊಂದಿಕೊಳ್ಳುವುದು ಮತ್ತು ಅವರ ಇಚ್ಛೆಯಂತೆ ಕೆಲಸ ಮಾಡುವುದು ಶಿಕ್ಷಕರಿಗೆ ಅನಿವಾರ್ಯವಾಗುತ್ತದೆ. ಪ್ರತಿಯೊಬ್ಬ ಅಧಿಕಾರಿಯೂ ವಿಶೇಷವಾಗಿರುವ ತನ್ನದೇ ಆದ ಛಾಪನ್ನು ಉಳಿಸಲು

ಬಯಸುತ್ತಾರೆ. ಉದಾ: ಒಬ್ಬ ಉಪನಿರ್ದೇಶಕರು, ಮಗ್ಗಿಯನ್ನು ಉಲ್ಟಾ ಹೇಳುವಂತೆ ಕಂಠಪಾಠ ಮಾಡಿಸಬೇಕು, ಎಲ್ಲಾ ಮಕ್ಕಳಿಗೂ ಎಲ್ಲಾ ದಿಕ್ಕುಗಳೂ ಗೊತ್ತಿರಬೇಕು ಇದನ್ನು ಕಂಠಪಾಠ ಮಾಡಿಸಬೇಕು ಎಂದು ಮೌಖಿಕವಾಗಿ ಆದೇಶಿಸಿದ್ದರು. ಅವರ ನಂತರ ಬಂದ ಅಧಿಕಾರಿಗಳು ಅದಕ್ಕೆ ಪ್ರಾಧಾನ್ಯತೆಯನ್ನೇ ನೀಡದೇ ಹೋದರು. ಹೀಗೆ ಬಂದ ಅಧಿಕಾರಿಗಳು ಅವರದ್ದೇ ಆದ ಆಲೋಚನೆಗಳನ್ನು ತಮ್ಮ ಕಾರ್ಯ ಕ್ಷೇತ್ರದ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲು ಬಯಸಿ ಶಿಕ್ಷಕರಿಗೆ ಹೊಸ ಆಲೋಚನೆಗಳನ್ನು ಕೊಡುತ್ತಾರೆ. ಕೆಲವು ಅಧಿಕಾರಿಗಳು ಭೇಟಿ ಸಮಯದಲ್ಲಿ ಅವರ ಅಪೇಕ್ಷೆಯಂತೆ ಶಾಲಾ ಸನ್ನಿವೇಶವಿದ್ದರೆ ತುಂಬಾ ಖುಷಿಪಡುತ್ತಾರೆ. ಇದನ್ನು ಅರಿತ ಶಿಕ್ಷಕರು ತಾತ್ಕಾಲಿಕವಾಗಿ ಅವರ ಅಪೇಕ್ಷೆಯಂತೆ ಶಾಲಾ ಸನ್ನಿವೇಶವನ್ನು ಅವರ ಭೇಟಿ ಸಂದರ್ಭದಲ್ಲಿ ಸೃಷ್ಟಿಸುತ್ತಾರೆ. ಇದು ಕೂಡ ಶಿಕ್ಷಕನ ತೋರಿಕೆಯ ಕೆಲಸಕ್ಕೆ ಒಂದು ಪ್ರೇರಣೆ.

ಇರುವ ಇತಿ–ಮಿತಿಯಲ್ಲಿ ಶಿಕ್ಷಕ ತನ್ನ ಅಸ್ಮಿತೆಯನ್ನು ತನ್ನ ವೃತ್ತಿಯ ಆಶಯಕ್ಕೆ ಅನುಗುಣವಾಗಿ ಗುರುತಿಸಿಕೊಳ್ಳಲು ಏನು ಮಾಡಬಹುದು?

ಶಿಕ್ಷಕ ತನ್ನ ವೃತ್ತಿಪರ ಕಾಳಜಿಗೆ ಆದ್ಯತೆ ಕೊಡಬೇಕು. ವಾಸ್ತವದಲ್ಲಿ ಇದಕ್ಕೆ ಸವಾಲುಗಳು ಇರಬಹುದು. ಈ ಸವಾಲುಗಳ ಅಡೆ–ತಡೆಗಳನ್ನು ಮೀರಿ ಅಪೇಕ್ಷಿತ ಸಮಾಜದ ರಚನೆಯಲ್ಲಿ ನನ್ನ ಪಾತ್ರ ಬಹುಮುಖ್ಯವಾದದ್ದು ಎಂಬುದನ್ನು ಗ್ರಹಿಸಿ ಇರುವ ಇತಿ–ಮಿತಿಗಳಲ್ಲಿ ಇರುವ ಅಡೆ–ತಡೆಗಳನ್ನು ಮೀರಿ ವ್ಯಕ್ತಿ, ಕುಟುಂಬ, ಸಮಾಜ, ಪ್ರಕೃತಿಯ ನೆಲೆಗಳಲ್ಲಿ ತನ್ನನ್ನು ತಾನು ಅಪೇಕ್ಷಿತವಾಗಿ ಬೆಳೆಸಿಕೊಳ್ಳುತ್ತಾ ಇತರರಿಗೆ ಮಾದರಿಯೊಂದನ್ನು ತನ್ನ ಬದುಕಿನ ಮೂಲಕವೇ ತೋರಿಸಬೇಕಾಗುತ್ತದೆ. ಇತರ ಹುದ್ದೆಗಳೊಂದಿಗೆ ಹೋಲಿಸಿಕೊಂಡು ಶಿಕ್ಷಕ ವೃತ್ತಿಯನ್ನು ಕೀಳಾಗಿ ಕಾಣುವ ಮನೋಭಾವನೆಯಿಂದ ಹೊರಬಂದು ಶಿಕ್ಷಕ ವೃತ್ತಿ ಸಮಾಜದಲ್ಲಿ ಅತ್ಯಂತ ಶ್ರೇಷ್ಠವಾದದ್ದು ಎನ್ನುವ ಭಾವನೆಯನ್ನು ಹೊಂದಬೇಕಿದೆ. ಶಿಕ್ಷಕ ವೃತ್ತಿಯ ಬಗ್ಗೆ ಇರುವ ಕೀಳರಿಮೆಯಿಂದ ಹೊರಬರಬೇಕಾಗಿದೆ.

ಕಲಿಯುವ ಮಕ್ಕಳು ದೇಶದ ಮುಂದಿನ ಪ್ರಜೆಗಳು, ಮುಂದಿನ ಪ್ರಜೆಗಳೇ ಮುಂದಿನ ಸಮಾಜ, ಇದರ ಸ್ಪಷ್ಟತೆ ಮತ್ತು ಕಾಳಜಿ ಶಿಕ್ಷಕರಿಗೆ ಇರಬೇಕು. ಒಳ್ಳೆಯ ಸ್ಪರ್ಧಾತ್ಮಕ ಪರೀಕ್ಷೆಗಳಿಂದ ಆಯ್ಕೆಯಾಗಿ ಬಂದ ಶಿಕ್ಷಕರೂ ಕೂಡ ಕೆಲವೇ ವರ್ಷಗಳಲ್ಲಿ ಶಿಕ್ಷಕ ವೃತ್ತಿಯ ಬಗ್ಗೆ ನಕಾರಾತ್ಮಕ ಭಾವನೆ ಹೊಂದಿರುವುದನ್ನು ನೋಡಿದರೆ ಆತಂಕವಾಗುತ್ತದೆ. ಇದು ಆಗಬಾರದು. ನಮ್ಮ ಸಂವಿಧಾನದ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಶಿಕ್ಷಣವನ್ನು ಎಲ್ಲ ಮಕ್ಕಳಿಗೂ ನೀಡಲು ಶಿಕ್ಷಕ ಸದಾ ಕಾಳಜಿ ವಹಿಸಬೇಕಾಗುತ್ತದೆ. ನಮ್ಮ ಸಮಾಜ ನಮ್ಮ ಶಿಕ್ಷಕರ ಆಲೋಚನೆಯ ಪ್ರತಿರೂಪ. ಹಾಗಾಗಿ ಸಮಾಜದಲ್ಲಿರುವ ಅನಪೇಕ್ಷಿತ ಸಂದರ್ಭಗಳಿಗೂ ಶಿಕ್ಷಕರಿಗೂ ಏನಾದರೂ ಸಂಬಂಧವಿದೆಯೇ? ಎಂಬುದನ್ನು ಆಲೋಚಿಸುವ ಅನಿವಾರ್ಯತೆಯಿದೆ.

ವಿಶ್ವ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳದಿದ್ದರೆ ಭವಿಷ್ಯದಲ್ಲಿ ಮಾನವ ಸಂಕುಲ ಅಪಾಯಕ್ಕೆ ಸಿಲುಕುವುದು ನಿಶ್ಚಿತವಾಗಿದೆ. ಇದಕ್ಕೆ ಪರಿಹಾರಗಳನ್ನು ಕಂಡುಕೊಳ್ಳಲು ಶಿಕ್ಷಣ ಬಹುಮುಖ್ಯವಾದ ಸಾಧನವಾಗಿದೆ. ಶಿಕ್ಷಕ

ತನ್ನ ಅಪೇಕ್ಷಿತ ಕರ್ತವ್ಯಗಳ ಮೂಲಕ ಉತ್ತಮ ಶಿಕ್ಷಣವನ್ನು ನೀಡಬೇಕಿದೆ. ವಿಶ್ವದ ಜ್ವಲಂತ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಅವನ ನಡವಳಿಕೆಗಳನ್ನು ನಿರ್ದೇಶಿಸುವತ್ತ ಶಿಕ್ಷಕನ ಪ್ರಯತ್ನಗಳು ಆಗಬೇಕು. ಭವಿಷ್ಯದ ಬದುಕಿಗೆ ಮಾರಕವಾಗದಂತಹ ವರ್ತನೆಗಳನ್ನು ಶಿಕ್ಷಿತ ಮಾನವ ತೋರಿಸಬೇಕಾದುದು ಅಗತ್ಯವಾಗಿದೆ. ಹಾಗಾಗಿ ಮಕ್ಕಳು ಈ ನೆಲೆಯಲ್ಲಿ ಶಿಕ್ಷಿತರಾಗಬೇಕಿದೆ. ಇದರಲ್ಲಿ ಶಿಕ್ಷಕರ ಪಾತ್ರ ಬಹುಮುಖ್ಯವಾದುದು.

## ಉಪಸಂಹಾರ

ಶಿಕ್ಷಣ ಮಾನವನ ಅಂತಸ್ಸತ್ವಗಳನ್ನು ಸರಿಯಾದ ದಿಕ್ಕಿನಲ್ಲಿ ನಿರ್ದೇಶಿಸಬೇಕು. ಆಗ ಉತ್ತಮ ಭವಿಷ್ಯದ ದೃಷ್ಟಿಯಲ್ಲಿ ಮಾನವ ಪ್ರಸ್ತುತ ಬದುಕನ್ನು ಅಪೇಕ್ಷಣೀಯವಾಗಿ ನಿರ್ವಹಣೆ ಮಾಡುತ್ತಾನೆ. ಇದಕ್ಕಾಗಿ ಪ್ರತಿಯೊಬ್ಬರಿಗೂ ಶಿಕ್ಷಣ ನೀಡಬೇಕೆಂಬ ನಿಟ್ಟಿನಲ್ಲಿ ವ್ಯಾಪಕ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇದಕ್ಕಾಗಿ ಅನೇಕ ಉಪಕ್ರಮಗಳನ್ನು ಜಾರಿಗೊಳಿಸುವ ಮೂಲಕ ಉತ್ತಮ ರೀತಿಯಲ್ಲಿ ಪ್ರಯತ್ನಿಸಲಾಗುತ್ತಿದೆ. ಎಲ್ಲಾ ಅರ್ಹ ವಯಸ್ಸಿನ ಮಕ್ಕಳಿಗೂ ಗುಣಾತ್ಮಕ ಶಿಕ್ಷಣ ಪಡೆಯುವ ಅವಕಾಶವನ್ನು ಅನುಕೂಲಗಳನ್ನು ಒದಗಿಸಲಾಗುತ್ತಿದೆ.

ಈ ನಿಟ್ಟಿನಲ್ಲಿ ಶಿಕ್ಷಕರ ಜವಾಬ್ದಾರಿ, ಸ್ಥಾನ–ಮಾನಗಳಿಗೆ ಬಹಳ ಮಹತ್ವವಿದೆ. ಶಿಕ್ಷಕ ತನ್ನ ಘನತೆಯನ್ನು ಶಿಕ್ಷಕ ವೃತ್ತಿಯಲ್ಲೇ ಕಂಡುಕೊಳ್ಳಬೇಕಿದೆ. ವರ್ತಮಾನದ ಬಿಕ್ಕಟ್ಟುಗಳಿಗೆ ಪ್ರತಿಕ್ರಿಯೆಯ ರೂಪದಲ್ಲಿ ಶಿಕ್ಷಕ ತನ್ನ ವರ್ತನೆಯನ್ನು ಮುಖಾಮುಖಿಯಾಗಿಸಬೇಕಿದೆ. ಶಿಕ್ಷಕ ವೃತ್ತಿಯನ್ನು ಒಬ್ಬ ವ್ಯಕ್ತಿ ಇಚ್ಛೆಪಟ್ಟು ಆಯ್ಕೆ ಮಾಡಿಕೊಂಡಿದ್ದಿರಬಹುದು ಅಥವಾ ಯಾವುದೋ ಅನಿವಾರ್ಯತೆಯಿಂದ ಆಯ್ಕೆ ಮಾಡಿಕೊಂಡಿದ್ದಿರಬಹುದು. ಹೇಗಾದರೂ ಆಗಲಿ ಶಿಕ್ಷಕನಾದ ಮೇಲೆ ಆ ವೃತ್ತಿಯ ಬಗ್ಗೆ ಒಲವನ್ನು ಹೊಂದಿ ಅದನ್ನು ಗೌರವದಿಂದ ನೋಡುವ, ಅನುಭವಿಸುವ, ಅದಕ್ಕೆ ತಕ್ಕ ಘನತೆಯನ್ನು ತಂದುಕೊಡುವ ನಿಟ್ಟಿನಲ್ಲಿ ತನ್ನನ್ನು ಆ ವೃತ್ತಿಯಲ್ಲಿ ಗುರುತಿಸಿಕೊಳ್ಳಬೇಕಾಗಿದೆ. ಇದು ಅತ್ಯಂತ ಮಹತ್ವವಾದದ್ದು.

**ಶಿವಕುಮಾರ್ ಎಸ್**. : ಎಂ.ಎ. (ರಾಜ್ಯಶಾಸ್ತ್ರ) ಹಾಗೂ ಬಿ.ಎಡ್. ಪದವೀಧರರು. ಇವರು ಸರ್ಕಾರಿ ಪದವಿಪೂರ್ವ ಕಾಲೇಜು ಕೊರಟಗೆರೆಯ ಪ್ರೌಢಶಾಲಾ ವಿಭಾಗದಲ್ಲಿ ಸಹಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕ್ಷೇತ್ರ ಸಂಪನ್ಮೂಲ ವ್ಯಕ್ತಿ, ಶಿಕ್ಷಣ ಸಂಯೋಜಕರಾಗಿ ಸೇವೆ ಸಲ್ಲಿಸಿರುವ ಇವರು ಶಿಕ್ಷಣ ಇಲಾಖೆ ಕೈಗೊಳ್ಳುವ ರಾಜ್ಯಮಟ್ಟದ ತರಬೇತಿಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸಿ ಗುರುಚೇತನ ಕಾರ್ಯಕ್ರಮದ ಅಡಿಯಲ್ಲಿ ಸಂಪನ್ಮೂಲ ಸಾಹಿತ್ಯ ರಚನಾ ಕಾರ್ಯದಲ್ಲಿ ತೊಡಗಿರುತ್ತಾರೆ. ಶಾಲಾ ಕರ್ತವ್ಯದಲ್ಲಿ ಖುಷಿ ಕಾಣಲು ಬಯಸುತ್ತಾರೆ.

*ಸಂಪರ್ಕ :* shivakumargs1968@gmail.com